श्री श्री जगदगुरु शङ्कराचार्य महासंस्थानम् , दक्षिणाम्नाय श्री शारदापीठम् , श्रृङ्गेरी

Sri Sri Jagadguru Shankaracharya Mahasamstanam

Dakshinamnaya Sri Sharada Peetham, Sringeri - 577 139, Karnataka. INDIA.



Padmashree Awardee, Guru Seva Dhurina
**Dr. V.R. Gowri Shankar** BE, DIISc, MIMA.,
CEO & Adminstrator
Sri Sringeri Math and its Properties

Phone Off: 08265-250123 Resi: 08265 - 250192 Fax : 08265-250792
Website : : www.sringerisharadapeetham.org (or) www.sringeri.net
E-mail : info@sringerisharadapeetham.org

Ref: Camp : Date :

**ಶ್ರೀಶಾಂಕರ ತತ್ತ್ವಪ್ರಸಾರ ಅಭಿಯಾನ – ಶಾಂಕರ ಪ್ರವಚನ ಮಾಲಿಕೆ**

ಆಸ್ತಿಕ ಬಂಧುಗಳೆ...

ಶ್ರೀಮತ್ಪರಮಹಂಸೇತ್ಯಾದಿ ಸಮಸ್ತ ಬಿರುದಾವಳಿ ವಿರಾಜಮಾನರಾದ ದಕ್ಷಿಣಾಮ್ನಾಯ ಶೃಂಗೇರಿ ಶ್ರೀಶಾರದಾಪೀಠಾಧೀಶ್ವರ ಜಗದ್ಗುರು ಶಂಕರಾಚಾರ್ಯ ಅನಂತ ಶ್ರೀವಿಭೂಷಿತ ಶ್ರೀಶ್ರೀಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ಹಾಗೂ ತತ್ಕರಕಮಲ ಸಂಜಾತರಾದ ಜಗದ್ಗುರು ಶ್ರೀಶ್ರೀಶ್ರೀ ವಿಧುಶೇಖರಭಾರತೀ ಸನ್ನಿಧಾನಂಗಳವರ ಆದೇಶ ಅನುಗ್ರಹದೊಂದಿಗೆ ಶ್ರೀ ಶಾಂಕರ ತತ್ತ್ವಪ್ರಸಾರ ಅಭಿಯಾನವು ಶ್ರೀ ಶಂಕರಾಚಾರ್ಯರ ತತ್ತ್ವೋಪದೇಶಗಳನ್ನು ಸಮಾಜಕ್ಕೆ ತಿಳಿಸುವ ಸಲುವಾಗಿ **'ಶಾಂಕರ ಪ್ರವಚನ ಮಾಲಿಕೆ'** ಯೋಜನೆಯಡಿಯಲ್ಲಿ ವಿದ್ವಾಂಸರ ಉಪನ್ಯಾಸಗಳನ್ನು ಶ್ರೀಮಠದ ಅಂತರ್ಜಾಲತಾಣದಲ್ಲಿ ಪ್ರಸಾರ ಮಾಡುವ ಯೋಜನೆ ಇದಾಗಿದೆ.

ಪ್ರತಿ ತಿಂಗಳ 2 ಹಾಗೂ 4ನೆಯ ಶನಿವಾರಗಳಂದು ಹೊಸ ಉಪನ್ಯಾಸವು ಶ್ರೀಮಠದ ಅಂತರ್ಜಾಲದಲ್ಲಿ ಪ್ರಸಾರಗೊಳ್ಳುವುದು. ಈ ಮಾಲಿಕೆಯಲ್ಲಿ ಶ್ರೀಮಾಧವೀಯ ಶಂಕರ ದಿಗ್ವಿಜಯ, ಶ್ರೀ ಆದಿಶಂಕರಾಚಾರ್ಯರ ಸ್ತೋತ್ರಗ್ರಂಥಗಳು, ವೇದಾಂತ ಪ್ರಕರಣಗಳು, ಸನಾತನ ಧರ್ಮ ಮತ್ತು ದರ್ಶನಗಳ ಪರಿಚಯ, ಶ್ರೀಮದ್ರಾಮಾಯಣ, ಭಾಗವತ, ಮಹಾಭಾರತದ ಶಾಂತಿಪರ್ವ, ಉಪನಿಷತ್ತಿನಲ್ಲಿರುವ ನೀತಿಕಥೆಗಳು ಇತ್ಯಾದಿ ವಿಷಯಗಳ ಕುರಿತು ವಿದ್ವಾಂಸರುಗಳ ಪ್ರವಚನವು ಕಂತುಕಂತುಗಳಲ್ಲಿ ಮೂಡಿಬರುವುದು. ಮಾಲಿಕೆಗಳಲ್ಲಿ ಬರುವ ಈ ಪ್ರವಚನಗಳು ಶ್ರೀಮಠದ ಅಂತರ್ಜಾಲತಾಣದಲ್ಲಿ ಸದಾ ಲಭ್ಯವಿದ್ದು, ಯಾವ ಸಮಯದಲ್ಲಿ ಬೇಕಾದರೂ ಜಿಜ್ಞಾಸುಗಳ ವೀಕ್ಷಣೆಗೆ ಸಿದ್ಧವಾಗಿರುತ್ತದೆ. ಪ್ರತಿಯೊಬ್ಬ ಆಸ್ತಿಕರು ಈ ಪ್ರವಚನ ಮಾಲಿಕೆಯ ಪ್ರಯೋಜನವನ್ನು ಪಡೆದು, ಶಾರದಾ ಚಂದ್ರಮೌಳೀಶ್ವರರ ಹಾಗೂ ಜಗದ್ಗುರು ಮಹಾಸ್ವಾಮಿಗಳವರ ಅನುಗ್ರಹಕ್ಕೆ ಪಾತ್ರರಾಗಿ ಕೃತಾರ್ಥರಾಗಬೇಕೆಂದು ಪ್ರಾರ್ಥಿಸುತ್ತಿದ್ದೇನೆ.

ಶಾಂಕರ ಪ್ರವಚನ ಮಾಲಿಕೆಯ ಉದ್ಘಾಟನಾ ಭಾಷಣ: **ಜಗದ್ಗುರು ಶಂಕರಾಚಾರ್ಯ ಶ್ರೀಶ್ರೀಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರು**

ಶಾಂಕರ ಪ್ರವಚನ ಮಾಲಿಕೆಯ ಅಂತರ್ಜಾಲತಾಣದ ಉದ್ಘಾಟನೆ: **ಜಗದ್ಗುರು ಶ್ರೀಶ್ರೀಶ್ರೀ ವಿಧುಶೇಖರಭಾರತೀ ಸನ್ನಿಧಾನಂಗಳವರ** ಅಮೃತಹಸ್ತದಿಂದ ದಿ. 26.10.2020 ಸೋಮವಾರ ವಿಜಯದಶಮಿಯಂದು.

**ಗುರುಸೇವಾಧುರೀಣ**
**ಪದ್ಮಶ್ರೀ ಪುರಸ್ಕೃತ**
**ಡಾ. ವಿ. ಆರ್. ಗೌರೀಶಂಕರ್**
**ಆಡಳಿತಾಧಿಕಾರಿಗಳು ಶ್ರೀಶಾರದಾಪೀಠ, ಶೃಂಗೇರಿ**